ಕೋಟಿ ರೂ.ಗಳಿಗೆ ಈ ನಾಲ್ಕು ರಸ್ತೆಗಳನ್ನು ತೆಗೆದುಕೊಂಡಿದ್ದು ಇದೆ. ಈ ನಾಲ್ಕು ರಸ್ತೆಗಳು ಈಗಾಗಲೇ pre-qualification ಅದ ಮೇಲೆ ಟೆಂಡರ್ short list ಆಗಿ ಫೈನಲ್ ಆದ ಮೇಲೆ financial bid open ಮಾಡಿ ಕೆಲಸ ಪ್ರಾರಂಭ ಮಾಡುತ್ತೇವೆ. ಅತಿ ಶೀಘ್ರದಲ್ಲಿ ಆಗುತ್ತದೆ ಎಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಕೆಶಿಪ್ – 2 ರಲ್ಲಿ ಮಂಜೂರಾಗಿ ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಕೊಟ್ಟಿದ್ದರು. ಆರ್ಥಿಕ ಇಲಾಖೆಯಿಂದ ಹಣ ಬಿಡುಗಡೆ ಮಾಡುವುದಕ್ಕೆ GO ಆಗಿತ್ತು. ಈ ರಸ್ತೆ ಬದಲಾವಣೆ ಮಾಡುವಂತಹ ಅವಶ್ಯಕತೆ ಏನಿತ್ತು? ರಸ್ತೆ ಬದಲಾವಣೆ ಮಾಡಿದರೆ ಅಡ್ಡಿ ಇಲ್ಲ. ಡಿಸೆಂಬರ್ ತಿಂಗಳವರೆಗೆ ಪ್ರಾರಂಭವಾಗುವುದಿಲ್ಲ. ಇನ್ನು ಅದಕ್ಕೆ World Bankನವರು clearnace ಕೊಡಬೇಕು. clearance ಆದ ಮೇಲೆ finance bid open ಆಗಬೇಕು. ಇದಕ್ಕೆ ಮೂರ್ನಾಲ್ಕು ತಿಂಗಳು ಹೋಗುತ್ತದೆ. ಇನ್ನು ಒಂದು ವರ್ಷದವರೆಗೆ ಕಾಯಬೇಕಾಗುತ್ತದೆ. ಒಂದು ವರ್ಷದವರೆಗೆ ನಮ್ಮ ರಸ್ತೆ ಪರಿಸ್ಥಿತಿ ಹೇಳಿ. ನಾವು ಯಾವ ತರಹ ಆ ಕ್ಷೇತ್ರದಲ್ಲಿ ಕೆಲಸ ಮಾಡಬೇಕು? ಮಾನ್ಯ ಅಧ್ಯಕ್ಷರ ಅದಕ್ಕೆ ಲೋಕೋಪಯೋಗಿ ಇಲಾಖೆಯಿಂದ ದುಡ್ಡು ಕೊಡಬೇಕು. ಇಲ್ಲದಿದ್ದರೆ ನಾನು ಧರಣಿ ಮಾಡುತ್ತೇವೆ.

ಅಧ್ಯಕ್ಷರು: ಉತ್ತರ ಹೇಳಲಿ. ನೀವು ಹಾಗೆಯೇ ಧರಣಿಗೆ ಬಂದರೆ ಹೇಗೆ? ನೀವು ಧರಣಿಗೆ ಬಂದರೆ ಅವರು ಉತ್ತರ ಹೇಳುವುದಿಲ್ಲ. ನಿಮ್ಮ ಜಾಗಕ್ಕೆ ಹೋಗಿ.

(ಈ ಹಂತದಲ್ಲಿ ಸದಸ್ಯರಾದ ಪ್ರಕಾಶ್ ಹುಕ್ಕೇರಿಯವರು ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು)

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ಈಗ ಟೆಂಡರ್ ಕೊಟ್ಟಿರುವುದರ ಬಗ್ಗೆ ಹೇಳಬೇಕೆಂದರೆ ಒಟ್ಟು 562 ಕಿ.ಮೀ. ರಸ್ತೆಗಳದ್ದಾಗಿದೆ. ಕೇವಲ ಮಾನ್ಯ ಸದಸ್ಯರು ಹೇಳುವ ಒಂದೇ ರಸ್ತೆಯ ಪ್ರಶ್ನೆಯಲ್ಲ. ನಾಲ್ಕು ರಸ್ತೆಗಳಿಗೆ ಸಂಬಂಧಿಸಿದಂಥ ವಿಚಾರವನ್ನು ಪ್ರಸ್ತಾಪ ಮಾಡಿ E.P.C. ಟೆಂಡರ್ ಬದಲಾವಣೆ ಯಾವ ರೀತಿಯಾಯಿತು ಎನ್ನುವುದನ್ನು ಹೇಳಿದ್ದೇನೆ. ವರ್ಲ್ಡ್ ಬ್ಯಾಂಕ್‌ನವರು ಮತ್ತು ಎ.ಬಿ.ಬಿ. ಫೈನಾನ್ಸ್‌ರವರ ಹತ್ತಿರ ಡಿಸ್‌ಕಶನ್ ಮಾಡಬೇಕಾದಾಗ ಈ ಉದ್ದದ ರಸ್ತೆಗಳನ್ನು ಮಡಬೇಕಾದಂಥ ಸಂದರ್ಭದಲ್ಲಿ, ಉಳಿದೆಲ್ಲಾ ರಸ್ತೆಗಳಿಗಿಂತ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದೆ. ಏಕೆಂದರೆ ಏಳೂವರೆ ವರ್ಷಗಳವರೆಗೆ ರಸ್ತೆ ನಿರ್ಮಾಣದ ನಂತರ ರಸ್ತೆ ಮೇನ್‌ಟೆನೆನ್ಸ್ ಮಾಡಬೇಕಾದ ಜವಾಬ್ದಾರಿ ಗುತ್ತಿಗೆದಾರರದ್ದಾಗಿರುತ್ತದೆ. ಇಷ್ಟು ಗುಣಮಟ್ಟದ

ರಸ್ತೆಯನ್ನು ಮಾಡುತ್ತಿರುವಂಥ ಸಂದರ್ಭದಲ್ಲಿ ಈ ರೀತಿ ಮಾನ್ಯ ಸದಸ್ಯರು ಆಕ್ಷೇಪವನ್ನು ಏಕೆ ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಮೊದಲು ಇದ್ದ ರೀತಿಯಲ್ಲಿ ಮಾಡುವುದಿದ್ದರೆ ಒಂದು ಸಲ ಟೆಂಡರ್ ಕರೆದು ಗುತ್ತಿಗೆದಾರರು ರಸ್ತೆ ನಿರ್ಮಾಣ ಮಾಡಿದ ಮೇಲೆ ತದನಂತರದಲ್ಲಿ ರಸ್ತೆಗಳನ್ನು ಮೇನ್‌ಟೆನೆನ್ಸ್ ಮಾಡುವ ಜವಾಬ್ದಾರಿ ಸಂಪೂರ್ಣವಾಗಿ ಸರ್ಕಾರದ ಮೇಲಿರುತ್ತಿತ್ತು. ಆದರೆ ಈಗ ಆ ರೀತಿಯಾಗುವುದಿಲ್ಲ. ಮೊದಲು ಮೂರು ವರ್ಷ ಸೇರಿದಂತೆ ಒಟ್ಟು ಹತ್ತು ವರ್ಷಗಳವರೆಗೆ ರಸ್ತೆಯನ್ನು ನಿರ್ವಹಣೆ ಮಾಡಬೇಕಾದಂಥ ಜವಾಬ್ದಾರಿ ಗುತ್ತಿಗೆದಾರರ ಮೇಲಿರುತ್ತದೆ. ಹೀಗಿರುವಾಗ ಮಾನ್ಯ ಸದಸ್ಯರು ಈ ರೀತಿ ಏಕೆ ಆಕ್ಷೇಪವನ್ನು ಇಂಥದ್ದಕ್ಕೆ ಮಾಡುತ್ತಿದ್ದರೋ ನನಗೆ ಗೊತ್ತಿಲ್ಲ. 2006 ರಲ್ಲಿ ಅವರ ಸರ್ಕಾರ ಇದ್ದಾಗಲೂ ಕೂಡ ಈ ರಸ್ತೆಯನ್ನು ಮಾಡುವುದಕ್ಕಾಗಿರುಲಿಲ್ಲವೆಂಬುದು ಕೂಡ ಅವರಿಗೂ ಗೊತ್ತು. ಅದುದರಿಂದ ನಾನು ಈಗ ಈ ರಸ್ತೆಯನ್ನು ಈಗ ಮೋಟರಬಲ್ ಮಾಡಿ, ಮೇನ್‌ಟೆನೆನ್ಸ್ ಮಾಡಿ ಇಡಬೇಕಾದಂಥ ಕೆಲಸವನ್ನು, ರಸ್ತೆಯನ್ನು ಮಾಡಿ ದುರಸ್ತಿ ಮಾಡಿಸುವಂಥ ಕೆಲಸವನ್ನು ಮಾಡಿಸುತ್ತೇನೆ ಎನ್ನುವಂಥ ಮಾತನ್ನು ಹೇಳುಬಯಸುತ್ತಾ ಇವತ್ತು ಇ ವಿಚಾರವನ್ನು ಇಲ್ಲಿಗೇ ಮುಕ್ತಾಯ ಮಾಡಬೇಕೆಂದು ಹೇಳಬಯಸುತ್ತೇನೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಬಿ. ಹುಕ್ಕೇರಿಯವರು ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು: ಮಾನ್ಯ ಸದಸ್ಯರೆ. ನೀವು ಸದನದ ಬಾವಿಯಿಂದ ಏನೇ ಮಾತನಾಡಿದರೂ ಅದರು ದಾಖಲೆಗೆ ಹೋಗುವುದಿಲ್ಲ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳುವ ವಿಚಾರದಲ್ಲಿ ಬೇರೆ ಪ್ರಶ್ನೆಯನ್ನು ಹಾಕಿದರೆ ಅದಕ್ಕೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಸಚಿವರು) **:** ಮಾನ್ಯ ಹುಕ್ಕೇರಿಯವರೆ, ಮಾನ್ಯ ಸಚಿವರು ಶಾಶ್ವತವಾಗಿ ಒಳ್ಳೆಯ ರಸ್ತೆಯನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದಾರಲ್ಲ. ? ಈಗ ಗುಂಡಿಗಳನ್ನು ತಕ್ಷಣ ಮುಚ್ಚಬೇಕು ಎನ್ನುವುದು ನಿಮ್ಮ ಒತ್ತಾಯವಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ರಸ್ತೆಯ ದುರಸ್ತಿಗೆ ತಕ್ಷಣದಲ್ಲಿ ಏನು ಮಾಡುತ್ತಾರೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಅಧ್ಯಕ್ಷರು : ಗುಂಡಿ ಮುಚ್ಚಿಸುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಬಹಳ ಸ್ಪಷ್ಟವಾದ ಮಾತುಗಳನ್ನು ಮಾನ್ಯ ಲೋಕೋಪಯೋಗಿ ಸಚಿವರು ಹೇಳುತ್ತಾ ತಕ್ಷಣ ಗುಂಡಿ ಮುಚ್ಚುವ, ಮೇನ್‌ಟೆನೆನ್ಸ್ ಮಾಡುವ ಕೆಲಸವನ್ನು ಮಾಡಿಸುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು: ಹುಕ್ಕೇರಿಯವರೆ, ಗುಂಡಿ ಮುಚ್ಚಿಸಿ ಮೇನ್‌ಟೆನೆನ್ಸ್ ಮಾಡಿಸುತ್ತಾರೆ. ನೀವು ಅವರ ಹತ್ತಿರ ಹೋಗಿ ಆಮೇಲೆ ಮಾತನಾಡಿ. ಮಾನ್ಯ ಸಚಿವರೆ, ಗುಂಡಿ ಮುಚ್ಚಿಸುವ ಕೆಲಸವನ್ನು ತಕ್ಷಣ ಮಾಡಿ.

ಶ್ರೀ ಸಿ.ಎಂ. ಉದಾಸಿ : ನಾನು ಈಗಾಗಲೇ ಹೇಳಿದ್ದೇನೆ.

ಅಧ್ಯಕ್ಷರು : ಮಾನ್ಯ ಹುಕ್ಕೇರಿಯವರೆ, ಗುಂಡಿ ಮುಚ್ಚಿಸುವ ಕೆಲಸವನ್ನು ತಕ್ಷಣ ಮಾಡಿಸುತ್ತಾರಂತೆ. ನೀವು ಸದನದ ಬಾವಿಯಿಂದ ನಿರ್ಗಮಿಸಿ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ : ತಕ್ಷಣದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಬೇಕು.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಮೋಟರಬಲ್ ಮಾಡಿಸುತ್ತೇನೆಂದು ಈಗಾಗಲೇ ಹೇಳಿದ್ದೇನಲ್ಲ? ಆ ರಸ್ತೆಯನ್ನು ಮೋಟರಬಲ್ ಮಾಡಿಸುತ್ತೇನೆಂದು ಹೇಳಿದ ಮೇಲೂ ತಾವು ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಟಿ.ಬಿ. ಜಯಚಂದ್ರ : ತಕ್ಷಣ ಎಂದು ಹೇಳಿ.

ಶ್ರೀ ಸಿ.ಎಂ. ಉದಾಸಿ : ಹೇಳಿದ್ದೇನೆ. ರಸ್ತೆಯನ್ನು ಮೋಟರಬಲ್ ಮಾಡಿಸುತ್ತೇನೆಂದು ಹೇಳಿದಮೇಲೂ ಈ ರೀತಿ ಸದನದ ಬಾವಿಯಲ್ಲಿ ಧರಣಿ ಮಾಡಿದರೆ ಹೇಗೆ ಹೇಳಿ.

ಅಧ್ಯಕ್ಷರು: ಹುಕ್ಕೇರಿಯವರೆ, ಗುಂಡಿ ಮುಚ್ಚಿಸುವ ಕೆಲಸವನ್ನು ಮಾಡಿಸುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ. ತಾವು ಬಾವಿಯಿಂದ ನಿರ್ಗಮಿಸಿ ತಮ್ಮ ಸ್ಥಾನಕ್ಕೆ ಹೋಗಿ.

(ಈ ಹಂತದಲ್ಲಿ ಧರಣಿ ನಿರತರಾಗಿದ್ದ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಬಿ. ಹುಕ್ಕೇರಿಯವರು ಸದನದ ಬಾವಿಯಿಂದ ನಿರ್ಗಮಿಸಿದರು)

(ಗೊಂದಲ)

ಶ್ರೀ ಸುನಿಲ್ ವಲ್ಯಾಪುರ್ : ಮಾನ್ಯ ಅಧ್ಯಕ್ಷರೆ,